ಅನೇಕ ತಾಲ್ಲೂಕುಗಳನ್ನು ಕಪ್ಪು ಮತ್ತು ಭೂದು ಪ್ರದೇಶವೆಂದು ವರ್ಗೀಕರಿಸಿರುವ ಆಜ್ಞೆಯನ್ನು ರದ್ದು ಪಡಿಸುವ ಬಗ್ಗೆ

೧೦೭ (೪೩) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಕಪ್ಪು ಮತ್ತು ಭೂದು ಪ್ರದೇಶಗಳೆಂದು ವರ್ಗೀಕರಣ ಮಾಡಿರುವ ಒಟ್ಟು ತಾಲ್ಲೂಕುಗಳ ಸಂಖ್ಯೆ ?

ಆ) ಹಾಗೇ ಕಪ್ಪು ಮತ್ತು ಭೂದು ತಾಲ್ಲೂಕುಗಳೆಂದು ಪರಿಗಣಿಸಿದ ತಾಲ್ಲೂಕುಗಳು ರಾಜ್ಯದಲ್ಲಿ ಎಷ್ಟು ಬರುತ್ತವೆ.

ಇ) ಒಂದು ಸಾರಿ ತಾಲ್ಲೂಕುಗಳನ್ನು ಕಪ್ಪು ಮತ್ತು ಭೂದು ಎಂದು ವರ್ಗಿಕರಿಸಿದ ಮೇಲೆ ಆ ತಾಲ್ಲೂಕಿಗೆ ಯಾವ ರೀತಿಯ ಸಾಲ ಸೌಲಭ್ಯವನ್ನು ಸರ್ಕಾರದಿಂದ ಆಗಲೀ ಅಥವಾ ಬ್ಯಾಂಕುಗಳಿಂದಾಗಲೀ ದೊರೆಯುವುದಿಲ್ಲವೆಂಬ ಅಂಶ ಸರ್ಕಾರಕ್ಕೆ ಗೊತ್ತಿದೆಯೆ ?

ಈ) ಸರ್ಕಾರವು ಎರಿಯಲ್ ಇನ್ವಾಟ್ ಉಪಗ್ರಹದ ಸಹಾಯದಿಂದ ಅಂತರ್ಜಲದ ಬಗ್ಗೆ ಯಾವುದೇ ಸಮೀಕ್ಷೆಯನ್ನು ಮಾಡಿಲ್ಲವೆನ್ನುವುದು ವಾಸ್ತವ ಸಂಗತಿಯೇ ತಿಳಿಸಿ ?

ಉ) ಪೂರ್ಣ ಪ್ರದೇಶವನ್ನು ಬಿಳಿ ಪ್ರದೇಶವೆಂದು ಪರಿಗಣಿಸಲು ರೈತರಿಗೆ ಒದಗುವ ಸೌಲಭ್ಯ ಇವುಗಳ ಬಗ್ಗೆ ಸರ್ಕಾರವುಕ್ಕೆಗೊಂಡಿರುವ ಕ್ರಮಗಳೇನು ?

ಶ್ರೀ ರಮೇಶ್ ಎಸ್. ಜಿಗಜಿಣಗಿ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು).—

ಅ) ಆರು ತಾಲ್ಲೂಕುಗಳು ಕಪ್ಪು ಮತ್ತು ಹತ್ತು ತಾಲ್ಲೂಕುಗಳು ಭೂದು ಎಂದು ವರ್ಗೀಕರಣ ಮಾಡಲಾಗಿದೆ.

ಆ) ಈ ಕೆಳಗೆ ನಮೂದಿಸಿರುವ ತಾಲ್ಲೂಕುಗಳನ್ನು ಕಪ್ಪು ಹಾಗೂ ಭೂದು ಪ್ರದೆಶವೆಂದು ವರ್ಗೀಕರಿಸಲಾಗಿದೆ.

ಜಿಲ್ಲೆ	ತಾಲ್ಲೂಕು	ವರ್ಗೀಕರಣ
೧. ಬೆಂಗಳೂರು	ಹೊಸಕೋಟೆ	ಕಪ್ಪು
	ದೇವನಹಳ್ಳಿ	ಕಪ್ಪು
೨. ಕೋಲಾರ	ಮುಳಬಾಗಿಲು	ಕಪ್ಪು
	ಗೌರಿಬಿದನೂರು	ಕಪ್ಪು
	ಬಂಗಾರಪೇಟೆ	ಭೂದು
	ಚಿಂತಾಮಣಿ	ಭೂದು
	ಕೋಲಾರ	ಭೂದು
	ಬಾಗೆ ಪಲ್ಲಿ	ಭೂದು
	ಮೂಲೂರು	ಭೂದು
	ಶಿಡ್ಲಘಟ್ಟ	ಭೂದು
೩. ಬೆಳಗಾಂ	ರಾಯಬಾಗ್	ಕಪ್ಪು
	ಚಿಕ್ಕೋಡಿ	ಭೂದು
೪. ಚಿತ್ರದುರ್ಗ	ಮೊಳಕಾಲ್ಮೂರು	ಕಪ್ಪು
೫. ಬಿಜಾಪುರ	ಇಂಡಿ	ಭೂದು
೬. ದಕ್ಷಿಣ ಕನ್ನಡ	ಮಂಗಳೂರು	ಭೂದು
೭. ಉತ್ತರ ಕನ್ನಡ	ಕುಮಟ	ಭೂದು

ಇ) ಗೊತ್ತಿದೆ.

ಈ) ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಅಂತರ್ಜಲ ಸಮೀಕ್ಷೆ ವಿಭಾಗ ಇಸ್ರೋ ಹಾಗೂ ದೂರ ಸಂವೇದನಾ ಸಂಸ್ಥೆ ಸಹಯೋಗದೊಂದಿಗೆ ಮಧ್ಯಮಗತಿಯ ಭೂಉಪಗ್ರಹದ ನಕಾಶೆಗಳನ್ನು ಬಳಸಿ ರಾಜ್ಯದ ವಿವಿಧ ಭಾಗಗಳಲ್ಲಿ ಸಮೀಕ್ಷೆಯನ್ನು ನಡೆಸಿದೆ.

ಉ) ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಂತರ್ಜಲ ಸಮೀಕ್ಷಾ ವಿಭಾಗವು ಈಗಾಗಲೇ ಬೆಂಗಳೂರು ಜಿಲ್ಲೆಯ ಹೊಸಕೋಟೆ ಮತ್ತು ದೇವನಹಳ್ಳಿ ತಾಲ್ಲೂಕು ಹಾಗೂ ಕೋಲಾರ ಜಿಲ್ಲೆಯ ಮುಳಬಾಗಿಲು ಮತ್ತು ಗೌರಿಬಿದನೂರು ತಾಲ್ಲೂಕುಗಳಲ್ಲಿ ಕಿರು ಜಲಾನಯನ ಪ್ರದೇಶ ಸಮೀಕೆಗಳನ್ನು ತೆಗೆದುಕೊಳ್ಳಲಾಗಿದೆ. ಇದೇ ರೀತಿ ರಾಜ್ಯದ ಇತರ ಕ್ಲಿಷ್ಟಕರ (ಕ್ರಿಟಿಕಲ್ ಬ್ಲಾಕ್ಸ್) ಪ್ರದೇಶಗಳಲ್ಲಿ ಸಮೀಕ್ಷೆಯನ್ನು ಕೈಗೊಳ್ಳುವ ಯೋಜನೆ ಇದೆ. ಒಮ್ಮೆ ಈ ಸಮೀಕ್ಷೆ ಮುಗಿದ ನಂತರ ಕ್ಲಿಷ್ಟಕರ ಪ್ರದೇಶಗಳಲ್ಲಿ ಒದಗಿಬರುವ ಮಾಹಿತಿ ಆಸ್ಪದ ಘೋಷಿತ ಪ್ರದೇಶಗಳನ್ನು ವರ್ಗೀಕರಿಸಲು ನಬಾರ್ಡ್ ಸಂಸ್ಥೆಗೆ ಪೂರ್ಣ ವರದಿಯನ್ನು ಪುನರ್ ಪರಿಶೀಲನೆಗಾಗಿ ಕಳುಹಿಸಿಕೊಡಲಾಗುವುದು. ಅಲ್ಲಿಯವರೆಗೆ ಈಗ ಹಾಲಿ ಇರುವ ನೀತಿಯನ್ನು ಅನುಸರಿಸಲಾಗುವುದು.

ವಿದ್ಯುತ್ ದರ ಏರಿಕೆಯ ಬಗ್ಗೆ

೧೦೮ (೩೧೧) ಶ್ರೀ ಎಂ. ವೀರಯ್ಯಸ್ವಾಮಿ (ಚಿಂಚೋಳಿ).—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

೧. ವಿದ್ಯುತ್ ದರ ಏರಿಕೆಯಿಂದ ಕೆಲವು ಉದ್ಯಮಗಳಿಗೆ ವಿಶೇಷವಾಗಿ ಜವಳಿ ಉದ್ಯಮ ಹಾಗೂ ಇಂಜಿನೀಯರಿಗ್ ಉತ್ಪಾದನಾ ವಸ್ತುಗಳ ಉದ್ಯಮಕ್ಕೆ ತೊಂದರೆ ಉಂಟಾಗಿರುವುದು ನಿಜವೇ ?

೨. ಹಾಗಿದ್ದಲ್ಲಿ ಎಷ್ಟು ಉದ್ಯಮಗಳು ವಿದ್ಯುತ್ ದರ ಏರಿಕೆಯಿಂದ ರೋಗಗ್ರಸ್ತವಾಗಿವೆ ಹಾಗೂ ರೋಗಗ್ರಸ್ತವಾಗುವುದರಲ್ಲಿವೆ ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುತ್‌ಚ್ಛಕ್ತಿ ಮಂತ್ರಿಗಳು).—

೧. ವಿದ್ಯುತ್ ದರ ಏರಿಕೆಯಿಂದ ಸಾಮಾನ್ಯವಾಗಿ ಎಲ್ಲಾ ಕೈಗಾರಿಕೆಗಳಿಗೂ ತೊಂದರೆಯಾಗಿಲ್ಲ.

೨. ಈವರೆಗೆ ಅಂತಹ ಯಾವುದೇ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿಲ್ಲ.

ರಾಜ್ಯದಲ್ಲಿ 'ಸಿ' ಮತ್ತು 'ಡಿ' ವರ್ಗದ ಜಮೀನಿನ ಲಭ್ಯತೆ ಬಗ್ಗೆ

೧೧೧ (ಳಳ) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದ ಜಿಲ್ಲೆಗಳಲ್ಲಿರತಕ್ಕ ಸಿ ಮತ್ತು ಡಿ ವರ್ಗದ ಜಮೀನಿನ ವಿಸ್ತೀರ್ಣ (ಜಿಲ್ಲಾವಾರು)

ಆ) ಇಲಾಖೆಯ ಸಾಮಾಜಿಕ ಅರಣ್ಯ ಯೋಜನೆಯಡಿಯಲ್ಲಿ ಸಿ ಮತ್ತು ಡಿ ವರ್ಗದ ಜಮೀನಿನ ಎಷ್ಟು ವಿಸ್ತೀರ್ಣದಲ್ಲಿ ಸಸಿಗಳನ್ನು ನೆಡಬಹುದು?

ಶ್ರೀ ಜಿ. ಎಸ್. ಬಾಗಲಕೋಟಿ (ಅರಣ್ಯ ರಾಜ್ಯ ಸಚಿವರು).—

ಅ) ಜಿಲ್ಲಾವಾರು ಸಿ ಮತ್ತು ಡಿ ವರ್ಗದ ಜಮೀನಿನ ವಿಸ್ತೀರ್ಣದ ವಿವರಣಾ ಪಟ್ಟಿಯನ್ನು ಲಗತ್ತಿಸಲಾಗಿದೆ.

ಆ) ೧೯೮೬-೮೭ನೇ ಇಸವಿಯವರೆಗೆ ಕರ್ನಾಟಕ ಸಾಮಾಜಿಕ ಅರಣ್ಯ ಯೋಜನೆಯಡಿಯಲ್ಲಿ ೭೫೨೭ ಹೆಕ್ಟೇರ್ ಪ್ರದೇಶದಲ್ಲಿ ಗಿಡಗಳನ್ನು ನೆಡಲಾಗಿದೆ.